**1 ನೇ ಅಪರ ಸಿ.ಜೆ. ಮತ್ತು ಜೆ ಎಂಎಫ್‌ಸಿ ನ್ಯಾಯಾಲಯ, ಮದ್ದೂರು**

ದಿಃ 12-09-2024 ರಂದು ಸಾಕ್ಷಿಯನ್ನು ಕರೆದು ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಆರೋಪಿ ಪರ ಶ್ರೀ ವಕೀಲರವರಿಂದಃ

ನಾನು ಎಸ್ ಎಸ್ ಎಲ್ ಸಿ ವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನಾನು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಬ್ಯಾಂಕ್ ಆಫ್ ಬರೋಡ ಮತ್ತು ಉಜ್ಜೀವನ ಬ್ಯಾಂಕ್ ಗಳಲ್ಲಿ ಖಾತೆ ಹೊಂದಿದ್ದೇನೆ. ಸದರಿ ಖಾತೆಯ ದಾಖಲೆಗಳನ್ನು ಹಾಜರುಪಡಿಸಿಲ್ಲ. ವಾರ್ಷಿಕವಾಗಿ ಒಂದರಿಂದ ಒಂದೂವರೆ ಲಕ್ಷ ಆದಾಯವಿದೆ. ಫ್ಯಾನ್ಸಿ ಸ್ಟೋರ್ ನಡೆಸುತ್ತಿರುವ ಬಗ್ಗೆ ಮತ್ತು ಲೈಸೆನ್ಸ್ ಪಡೆದಿರುವ ಬಗ್ಗೆ ದಾಖಲಾತಿ ಹಾಜರುಪಡಿಸುತ್ತೀರ ಎಂದರೆ ಲೈಸೆನ್ಸ್ ಪಡೆದಿಲ್ಲ ಎನ್ನುತ್ತಾರೆ. ಮಾಸಿಕವಾಗಿ 20 -30 ಸಾವಿರ ಖರ್ಚಾಗುತ್ತದೆ. ಆರೋಪಿ 2013 ರಿಂದ ಪರಿಚಯವಿದ್ದಾರೆ. 2015 ರಿಂದಲೂ ನಾನು ಬಾಡಿಗೆ ಮನೆಯಲ್ಲೇ ವಾಸಿಸುತ್ತಿದ್ದೇನೆ ಎಂದರೆ ಸರಿ . ಫ್ಯಾನ್ಸಿ ಸ್ಟೋರ್ ನ ಆದಾಯವನ್ನು ಹೊರತುಪಡಿಸಿ ನನಗೆ ಬೇರೆ ಯಾವುದೇ ಆದಾಯದ ಮೂಲ ಇಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನನ್ನ ಅಣ್ಣನ ಮಕ್ಕಳು ಕೆಲಸಕ್ಕೆ ಹೋಗುತ್ತಿದ್ದು ಜೊತೆಯಲ್ಲೆ ಇದ್ದಾರೆ ಎನ್ನುತ್ತಾರೆ. ನನ್ನ ಅಣ್ಣನ ಮಗನ ಹೆಸರು ವಿಕಾಸ್ ಗೌಡ ಸದರಿಯವರು ಔಟ್ ಶೈನಿಂಗ್ ಎಂಬ ಚನ್ನಪಟ್ಟಣದಲ್ಲಿರುವ ಕಂಪನಿಯಲ್ಲಿ ಸೀನಿಯರ್ ಮೆಕ್ಯಾನಿಕ್ ಆಗಿ ಕೆಲಸ ಮಾಡುತ್ತಿದ್ದಾರೆ. ಸದರಿಯವರಿಗೆ ಮಾಸಿಕ ರೂ. 30 ಸಾವಿರ ಸಂಬಳ ಬರುತ್ತದೆ. ಸದರಿಯವರಿಗೆ ರೂ. 30 ಸಾವಿರ ಸಂಬಳ ಬರುತ್ತದೆ ಎಂದು ತೋರಿಸಲು ದಾಖಲಾತಿ ಹಾಜರುಪಡಿಸಿಲ್ಲ ಹಾಜರುಪಡಿಸುತ್ತೇನೆ ಎನ್ನುತ್ತಾರೆ ದಿ 10-09-2020 ರಂದು ನನ್ನ ಬಳಿ ಹತ್ತು ಲಕ್ಷ ಇತ್ತು ಎಂದು ತೋರಿಸಲು ಯಾವುದೇ ದಾಖಲಾತಿ ಹಾಜರುಪಡಿಸಿಲ್ಲ ಸಾಕ್ಷಿಯು ಮುಂದುವರೆದು ಹಾಜರುಪಡಿಸುತ್ತೇನೆ

ಎನ್ನುತ್ತಾರೆ. ಸದರಿ 10 ಲಕ್ಷವು ಮನೆ ಮತ್ತು ನಿವೇಶನದ ಮಾರಾಟದಿಂದ ಬಂದಿದೆ. ಸದರಿ ವಿಚಾರವನ್ನು ನನ್ನ ದೂರು ಮತ್ತು ಪ್ರಮಾಣಪತ್ರದಲ್ಲಿ ಹೇಳಿಲ್ಲ. ಆರೋಪಿಯು ಕೂಡ ಬಾಡಿಗೆ ಮನೆಯಲ್ಲಿ ವಾಸಿಸುತ್ತಾರೆ ಎಂದರೆ ಸರಿ . ಆರೋಪಿಯು ಮೋದಿಕೇರ್ ಪ್ರಾಡಕ್ಟ್ ಗಳನ್ನು ಮಾರಾಟ ಮಾಡುತ್ತಾರೆ. ಸದರಿಯವರಿಗೆ ಎಷ್ಟು ಆದಾಯದ ಮೂಲ ಇದೆ ಎಂದು ತಿಳಿದುಕೊಂಡಿಲ್ಲ. ನನ್ನ ಬಳಿ ರೂ 10 ಲಕ್ಷ ಇಲ್ಲದಿದ್ದರೂ ಆರೋಪಿಯ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಕುದರಗುಂಡಿಯ ಶೇಖರ್ ಮದ್ದೂರಿನ ಪವಿತ್ರಾ ಮತ್ತು ಬೆಸಗರಹಳ್ಳಿಯ ನಂದಾರವರ ಪರಿಚಯವಿದೆ ಎಂದರೆ ಸರಿ . ಸದರಿ ಆರೋಪಿಗೆ 10 ಲಕ್ಷ ನೀಡುವಾಗ ನನ್ನ ಅಣ್ಣನ ಮಕ್ಕಳು , ಮಹೇಶ್ ಸಿದ್ದಣ್ಣ ಎಂಬುವವರು ಇದ್ದರು . ಸದರಿಯವರನ್ನು ಸಾಕ್ಷಿದಾರರನ್ನಾಗಿ ಮಾಡಿಲ್ಲ. ಸದರಿಯವರು ಇದ್ದರು ಎಂಬ ವಿಚಾರವನ್ನು ನನ್ನ ದೂರಿನಲ್ಲಾಗಲೀ ಪ್ರಮಾಣಪತ್ರದಲ್ಲಾಗಲೀ ಹೇಳಿಲ್ಲ. ನನ್ನ ವಿರುದ್ಧ ಮದ್ದೂರು ನ್ಯಾಯಾಲಯದಲ್ಲಿ ಸುಮಾರು 7-8 ಚೆಕ್ ಬೌನ್ಸ್ ಪ್ರಕರಣಗಳು ದಾಖಲಾಗಿದ್ದೇವೆ ಎಂದರೆ ಸರಿ ಸಾಕ್ಷಿಯು ಮುಂದುವರೆದು ನಾನು ಕೂಡ ದಾಖಲು ಮಾಡಿದ್ದೇನೆ ಎನ್ನುತ್ತಾರೆ. ನಾನು ಬಡ್ಡಿ ವ್ಯವಹಾರ ಮತ್ತು ಚೀಟಿ ವ್ಯವಹಾರ ಮಾಡುತ್ತೇನೆ ಎಂದರೆ ಸರಿ .

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ

(ಶ್ರೀಮತಿ ನಳಿನ ಎಸ್.ಸಿ.)
1 ನೇ ಅಪರ ಸಿವಿಲ್ ನ್ಯಾಯಾಧೀಶರು,
ಮದ್ದೂರು